UASB LIBRARY
Jai Kisan
Newspaper Clippings
Tuesday 21-03-2023
Pg. 1

ವಿಕ ರೈತರು ನೈಜ ಸೂಪರ್ ಸ್ಟಾರ್‌ಗಳು ಎಂದ ಸಿಎಂ

ರೈತ ಸಾಧಕರಿಗೆ ವಿಕ ಸೂಪರ್ ಸ್ಟಾರ್ ಪ್ರಶಸ್ತಿ ಪ್ರದಾನ । ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಮಿನಿ ಕೃಷಿ ಮೇಳ । ವಿವಿಧೆಡೆಯ ರೈತರ ಸಂಗಮ



ಜಿಕೆವಿಕೆ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿನ್ನೇ ವರ್ಷದ ರಾಜ್ಯಮಟ್ಟದ ಸೂಪರ್ ಸ್ಟಾರ್ ರೈತ ಪ್ರಶಸ್ತಿಯನ್ನು ಸಿಎಂ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು.

ವಿಕ ಸೂಪರ್ ಸ್ಟಾರ್ ಪ್ರಶಸ್ತಿ ದೊರೆತಿರುವುದರಿಂದ ಜವಾಬ್ದಾರಿ ಹೆಚ್ಚಿದಂತಾಗಿದ್ದು, ಕೃಷಿಯಲ್ಲಿ ಮತ್ತಷ್ಟು ಸಾಧನೆ ಮಾಡುವಂತಹ ಪ್ರೇರಣೆ ಸಿಕ್ಕಿದೆ.
-ಹರೀಶ್, ವಿಠಲಪುರ ಚಿಕ್ಕಮಗಳೂರು

ವಿಜಯ ಕರ್ನಾಟಕ ಪತ್ರಿಕೆ ಸಮಸ್ತ ಕೃಷಿಗಾಗಿ ನಸಗೆ ವಿಕ ಸೂಪರ್ ಸ್ಟಾರ್ ಪ್ರಶಸ್ತಿ ನೀಡಿ ಬೆನ್ನುತಟ್ಟಿದೆ. ಇದಿಗ ಈ ಪ್ರಶಸ್ತಿಯಿಂದ ಮತ್ತಷ್ಟು ಸ್ಫೂರ್ತಿ ಸಿಕ್ಕಿದೆ. ಇನ್ನಷ್ಟು ಕೆಲಸ ಮಾಡಲು ಉತ್ಸುಕನಾಗಿದ್ದೇನೆ.
-ಶಿವರಾಜ ಶಾಯಿಕ, ಗೌಡನಬಾವಿ, ರಾಯಚೂರು

ಸೈಸರ್ಗಿಕ ಮಿಶ್ರ ಬೆಳೆಗೆ ವಿಕ ಸೂಪರ್ ಸ್ಟಾರ್ ಪ್ರಶಸ್ತಿ ದೊರೆತಿದೆ. ಮಾಧ್ಯಮವೊಂದು ಈ ರೀತಿ ಸಮಾಜ ಮುಖಿ ಕಾರ್ಯ ಮಾಡುತ್ತಿರುವುದು ಉತ್ತಮವಾದುದು.
-ದೊಡ್ಡಬಸವನಗೌಡ ಬಳ್ಳಾರಿ

ರಾಜ್ಯದ ನಾನಾ ಜಿಲ್ಲೆಗಳ ರೈತರನ್ನು ಈ ರೀತಿಯ ಪ್ರಶಸ್ತಿಯ ಹೆಸರಿನಲ್ಲಿ ಒಂದೇ ವೇದಿಕೆಗೆ ಸೇರಿಸುವುದು ಸಂತಸದ ವಿಷಯ. ಇದರಿಂದ ವಿಷಯ ವಿನಿಮಯವಾಗಿ ಕೃಷಿಯಲ್ಲಿ ಮತ್ತಷ್ಟು ಹೊಸ ಹೊಸ ಆಲೋಚನೆಗಳು ಹುಟ್ಟಬಹುದು.
-ಅಂಜನೇಯ ಶಿವಮೊಗ್ಗ

ವಿಜಯ ಕರ್ನಾಟಕ ಪತ್ರಿಕೆ ರೈತರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಸಮಾಜದ ಮೇಲಿನ ಕಳಕಳಿ ತೋರಿಸುತ್ತದೆ. ಇಂತಹ ಕಾರ್ಯಗಳು ನಿರಂತರವಾಗಿ ನಡೆದಾಗ ರೈತರಿಗೂ ಮತ್ತಷ್ಟು ಪ್ರೋತ್ಸಾಹ ದೊರೆಯುತ್ತದೆ.
-ಶಾಮದೇವ ಮೇತ್ರಿ, ಘೋಣ್ಣಾ ಬೀದರ್

ಇಂಥದೊಂದು ಪ್ರಶಸ್ತಿ ಲಭಿಸುತ್ತದೆ ಎಂದಾಗಲೀ ಊಹಿಸಿರಲಿಲ್ಲ. ಕೃಷಿ ಕ್ಷೇತ್ರದಲ್ಲಿ ಸನ್ನನ್ನು ಗುರುತಿಸಿ ಪ್ರಶಸ್ತಿ ನೀಡಿದ ವಿಜಯ ಕರ್ನಾಟಕಕ್ಕೆ ಧನ್ಯವಾದಗಳು.

ಅನ್ನದಾತರಿಗೆ ಶಕ್ತಿ ತುಂಬಿದರೆ ಆರ್ಥಿಕತೆಗೆ ಆರೋಗ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

ರೈತನ ಬದುಕು ಹಸನಾಗಬೇಕಾದರೆ ಗ್ರಾಮೀಣ ಆರ್ಥಿಕತೆ ಬಲವರ್ಧನೆಯಾಗಬೇಕು. ಅದಕ್ಕೆ ಸಾಲ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲು ಈಗಾಗಲೇ ಬ್ಯಾಂಕರ್‌ಗಳ ಜತೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಜಯ ಕರ್ನಾಟಕ ಪತ್ರಿಕೆಯು, ರಾಜ್ಯ ಸರಕಾರ ಹಾಗೂ ಕೃಷಿ ಇಲಾಖೆ ಸಹಯೋಗದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಸೋಮವಾರ ಆಯೋಜಿಸಿದ್ದ ರಾಜ್ಯ ಮಟ್ಟದ ವಿಕ ಸೂಪರ್ ಸ್ಟಾರ್ ರೈತ-2022 ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರೈತ ಸಾಧಕರಿಗೆ ಪ್ರಶಸ್ತಿ ನೀಡಿ ಅವರು ಮಾತನಾಡಿದರು.

ರೈತನಿಗೆ ಶಕ್ತಿ ತುಂಬುವ ಕಾಲ: "ರೈತ ಉಳಿದರೆ ಮಾತ್ರ ಕೃಷಿ ಉಳಿಯುತ್ತದೆ. ರೈತ ಕೇಂದ್ರಿತ ಕಾರ್ಯಕ್ರಮಗಳನ್ನು ರೂಪಿಸಿ ರೈತನಿಗೆ ಶಕ್ತಿ ತುಂಬುವ ಕಾಲ ಬಂದಿದೆ. ಕೃಷಿ ಬೆಳೆಗೆ ತಕ್ಕಂತೆ ಸಾಲ ನೀಡಲು ಶೂನ್ಯ ಬಡ್ಡಿಯಲ್ಲಿ 5 ಲಕ್ಷದವರೆಗೆ ರೈತರಿಗೆ ಸಿಗುವ ಸಾಲದ ಪ್ರಮಾಣ ಹೆಚ್ಚಳ ಮಾಡಲಾಗಿದೆ. ರೈತ ವಿದ್ಯಾನಿಧಿ ರೂಪಿಸುವ ಮೂಲಕ ರೈತರ ಮಕ್ಕಳು ಉನ್ನತ ವ್ಯಾಸಂಗ ಮಾಡಿ ದೇಶ ವಿದೇಶಗಳಲ್ಲಿ ಉದ್ಯೋಗ ಮಾಡುವ ಮೂಲಕ ಆದಾಯ ಹೆಚ್ಚಳ ಪಡೆಯುವಂತಾಗಿ ಬೇಕು. ಗ್ರಾಮೀಣ ಭಾಗದ ಮಕ್ಕಳು ಹೆಚ್ಚು ಬುದ್ಧಿವಂತರಾಗಿರುತ್ತಾರೆ. 180 ಕೋಟಿ ರೂ.ಗಳ ಬೆಚ್ಚರಲ್ಲಿ ರೈತರಿಗೆ ವಿಮಾ ಯೋಜನೆ ಜಾರಿಯಾಗಿದೆ. ರೈತನ ಸಹಜ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡ್ರೋನ್‌ನಿಂದ ನ್ಯಾನೋ ಯೂರಿಯಾ ಸಿಂಪಡಣೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಸಾವಾದರೂ ಅವನ ಕುಟುಂಬಕ್ಕೆ 2 ಲಕ್ಷ ರೂ. ವಿಮಾ ಹಣ ಬರುವಂತೆ ಮಾಡಲಾಗಿದೆ," ಎಂದರು.

"3600 ಕೋಟಿ ರೂ. ಆವರ್ತ ನಿಧಿಯಡಿ ರೈತರ ಆದಾಯ ಹೆಚ್ಚಳ ಮಾಡಲು 300 ಕೋಟಿ ರೂ.ಗಳ ವಿಶೇಷ ಆವರ್ತ ನಿಧಿ ಮೀಸಲಿಡಲಾಗಿದೆ. ರೈತರಿಗೆ ಯಶಸ್ವಿನಿ ಯೋಜನೆಯನ್ನು ಪುನಃ ಪ್ರಾರಂಭಿಸಲಾಗಿದೆ," ಎಂದು ಹೇಳಿದರು.

ರೈತನಿಗೆ ರಾಜಕೀಯ ಪಕ್ಷವಿಲ್ಲ: "ರೈತ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿಲ್ಲ, ಎಲ್ಲ ಪಕ್ಷಗಳೂ ರೈತನಿಗೆ ಸೇರಿವೆ. ಇದನ್ನು ಅರ್ಥ ಮಾಡಿಕೊಳ್ಳಬೇಕು," ಎಂದರು.

ಕೃಷಿ ಸಚಿವ ಬಿ.ಸಿ.ಪಾಟೀಲ್, ಖ್ಯಾತ ಚಿತ್ರನಟ ನೀನಾನಂ ಸತೀಶ್, ವಿಜಯ ಕರ್ನಾಟಕ ಮತ್ತು ಬೆಂಗಳೂರು ಮಿರರ್‌ನ ಸಿಇಒ ರಂಜಿತ್ ಕಾಟೆ, ಕೃಷಿ ಇಲಾಖೆ ನಿರ್ದೇಶಕ ಡಾ.ಜಿ.ಟಿ.ಪುತ್ರ, ಜಲಾನಯನ ಅಭಿವೃದ್ಧಿ ಇಲಾಖೆ ನಿರ್ದೇಶಕ ಬಿ.ವೈ.ಶ್ರೀನಿವಾಸ್, ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಜಿ.ಕುಸುಮಾ ಮತ್ತಿತರರು ಉಪಸ್ಥಿತರಿದ್ದರು.

ವಿಕ ಕಾರ್ಯಕ್ಕೆ ಸಿಎಂ ಮೆಚ್ಚುಗೆ

"ವಿಜಯ ಕರ್ನಾಟಕ ರೈತ ಸಾಧಕರನ್ನು ಗುರುತಿಸಿ ಸೂಪರ್ ಸ್ಟಾರ್ ಪ್ರಶಸ್ತಿ ನೀಡಿ ಗೌರವಿಸಿ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ. ಸರಕಾರದ ಹತ್ತು ಹಲವು ಪ್ರಶಸ್ತಿಗಳನ್ನು ಪಡೆಯಬಹುದು, ಆದರೆ, ಸಮಾಜದ ಓರೆ ಕೋರೆಗಳನ್ನು ತಿದ್ದುವ ಪತ್ರಿಕೆ ನೀಡುವ ಪ್ರಶಸ್ತಿ ಒಂದು ರೀತಿಯ ಕ್ರಿಟಿಕ್ ಅವಾರ್ಡ್ ಇದ್ದಂತೆ. ಹಾಗಾಗಿ, 'ವಿಕ'ದ ಪ್ರಶಸ್ತಿಗಳು ಶ್ರೇಷ್ಠ ಮತ್ತು ಅಪ್ಪಗಳಿಗೆ ಅಧಿಕ ಮೌಲ್ಯವಿದೆ," ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.



ಸರಕಾರದಿಂದ ರೈತರಿಗೆ ಸಾಕಷ್ಟು ಸವಲತ್ತು ನೀಡಲಾಗುತ್ತಿದೆ. ಅವುಗಳನ್ನು ರೈತರು ಸಮರ್ಪಕವಾಗಿ ಬಳಸಿಕೊಂಡು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡರೆ ಕೃಷಿ ಖಂಡಿತಾ ಲಾಭದಾಯಕ. ರೈತರು ಆ ನಿಟ್ಟಿನಲ್ಲಿ ಹೊಸ ತಂತ್ರಜ್ಞಾನ ಹಾಗೂ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಲು ಮುಂದಾಗಬೇಕು.
- ಡಾ.ಎಸ್.ವಿ.ಸುರೇಶ, ಕುಲಪತಿ, ಬೆಂಗಳೂರು ಕೃಷಿ ವಿ.ವಿ

ಸಮಾಜದಲ್ಲಿ ರೈತರನ್ನು ಪ್ರೋತ್ಸಾಹಿಸಿ ಗೌರವಿಸುವಂತಹ ಕಾರ್ಯಗಳು ನಡೆಯಬೇಕಿತ್ತು. ಅದನ್ನು ವಿಜಯ ಕರ್ನಾಟಕ ಮಾಡುತ್ತಿರುವುದು ಮತ್ತಷ್ಟು ಸಂತಸ ತಂದಿದೆ. ಈ ಕಾರ್ಯ ಹೀಗೇ ಮುಂದುವರಿಯಲಿ.
-ರಮೇಶ್‌ಕುಮಾರ್ ಮುಳಬಾಗಲು

ಪ್ರಶಸ್ತಿ ನೆಪದಲ್ಲಿ ಎಲ್ಲ ಜಿಲ್ಲೆಗಳ ರೈತರನ್ನು ಒಂದೇ ವೇದಿಕೆಯಡಿ ಸೇರಿಸುವುದು ಉತ್ತಮ ಕಾರ್ಯ. ಕೃಷಿ ಬಗ್ಗೆ ಮಾಹಿತಿ ವಿನಿಮಯವಾಗಿ ಇದರಿಂದ ಇನ್ನಷ್ಟು ಜ್ಞಾನ ದೊರೆಯುತ್ತದೆ.
-ಬಸವರಾಜು ನೆಲಮಂಗಲ

ರೈತರು ತಮಗೆ ಗೊತ್ತಿರುವ ಒಂದೇ ವಿಧಾನದಲ್ಲಿ ಕೃಷಿ ಮಾಡುತ್ತಾ ಹೋಗುತ್ತಾರೆ. ಆದರೆ, ಇಂತಹ ಕಾರ್ಯಕ್ರಮಗಳು ನಡೆದಾಗ ಒಟ್ಟಿಗೆ ಸೇರುವ ರೈತರು ಮಾಹಿತಿ ವಿನಿಮಯ ಮಾಡಿಕೊಂಡು ಕೃಷಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳುಲು ಸಾಧ್ಯ.
- ಆನಂದ ಪತ್ರೆಪ್ಪ ವಾಲಿ ಬನವನಗರ, ಬೆಳಗಾವಿ

ವಿಜಯ ಕರ್ನಾಟಕ ಮಹಿಳಾ ರೈತರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಇನ್ನಿಲ್ಲದ ಸಂತೋಷ ತಂದಿದೆ. ಈ ಮೂಲಕ ಕೃಷಿ ವಲಯದಲ್ಲಿ ಮಹಿಳೆಯರನ್ನು ಉತ್ತೇಜಿಸಿದಂತಾಗಿದೆ. ಹಾಗಾಗಿ, ವಿಜಯ ಕರ್ನಾಟಕಕ್ಕೆ ತುಂಬು ಹೃದಯದ ಧನ್ಯವಾದಗಳು.
-ಕಲ್ಪನಾ ಮಂಜುನಾಥ ದೊಡ್ಡಮನಿ ಬನವನಬಾಗೇವಾಡಿ

ವಿಜಯ ಕರ್ನಾಟಕ ಕೃಷಿ ಕ್ಷೇತ್ರದಲ್ಲಿ ಮಾಡಿರುವ ಕಾಯಕ ಗುರುತಿಸಿ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ನೀಡುತ್ತಿರುವುದು ಖುಷಿ ತಂದಿದೆ. ಇದು ರೈತ ವಲಯವೇ ಮೆಚ್ಚುವಂತಹ ಕಾರ್ಯಕ್ರಮ.

21-03-2023
V-karanataka Pg 01



ರಾಗಿ ತೂರುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಿಎಂ

ಅಡಕೆ ಮರದಲ್ಲಿ ಕುರುಚಲು ಹಿಂಗಾರ

ತೀರ್ಥಹಳ್ಳಿ(ಶಿವಮೊಗ್ಗ): ಮಲೆನಾಡು ವ್ಯಾಪ್ತಿಯಲ್ಲಿ ಕಳೆದ ಮಳೆಗಾಲದಲ್ಲಿ ಅಡಕೆ ತೋಟಗಳಿಗೆ ತೀವ್ರವಾಗಿ ಬಾಧಿಸಿದ್ದ ಎಲೆಚುಕ್ಕಿ ರೋಗ ಬೇಸಿಗೆ ಬಿಸಿಲು ಏರುತ್ತಿದ್ದಂತೆ ಹತೋಟಿಗೆ ಬಂದಿದೆ. ಆದರೆ, ರೋಗದ ದುಷ್ಪರಿಣಾಮ ಮುಂದಿನ ಸಾಲಿನ ಫಸಲಿಗೆ ನಾಟಿದೆ. ಬಹುತೇಕ ಬಾಧಿತ ತೋಟದಲ್ಲಿ ಅಡಕೆ ಮರಗಳು ಕುರುಚಲು ಹಿಂಗಾರ ಹೊತ್ತು ನಿಂತಿವೆ.

ಎಲೆಚುಕ್ಕಿ ರೋಗ ಅಡಕೆ ತೋಟದಲ್ಲಿ ಅನೇಕ ಅಡ್ಡ ಪರಿಣಾಮ ಉಂಟು ಮಾಡಿರುವುದು ಕ್ರಮೇಣ ಗೋಚರಿಸುತ್ತಿದೆ. ಹಿಂಗಾರ ಕಿರಿದಾಗಲು ಎಲೆಚುಕ್ಕಿ ರೋಗ ಕಾರಣವೇ, ರೋಗ ನಿಯಂತ್ರಣಕ್ಕೆ ಬಳಸಿದ ರಾಸಾಯನಿಕ ಔಷಧ ಕಾರಣವೇ, ಬಿಸಿಲು, ಚಳಿ ವಾತಾವರಣವೇ ಎಂಬುದು ರೈತರಿಗೆ ತಿಳಿಯದಂತಾಗಿದೆ. ಆರೋಗ್ಯಯುತ ಅಡಕೆ ಮರದಲ್ಲಿ ಐದಾರು ಹಿಂಗಾರಗಳು ಬರುವುದು ಸಾಮಾನ್ಯ. ಆದರೆ, ರೋಗಬಾಧಿತ ಅಡಕೆ ಮರದಲ್ಲಿ ಹಿಂಗಾರದ ಸಂಖ್ಯೆ ಸಹ ಕಡಿಮೆ ಆಗಿದೆ.

ಅತಿಹೆಚ್ಚು ಮಳೆ ಸುರಿಯುವ ನಿತ್ಯಹರಿದ್ವರ್ಣ ಪ್ರದೇಶವಾದ ಆಗುಂಬೆ ಭಾಗದಲ್ಲಿ ಹೆಚ್ಚಾಗಿ ಕಂಡುಬಂದ ಎಲೆಚುಕ್ಕಿ ರೋಗ ಮುಂದಿನ ಸಾಲಿನಲ್ಲೂ ಉಲ್ಬಣಿಸಬಹುದು ಎಂಬ ಆತಂಕ ರೈತರನ್ನು ಕಾಡುತ್ತಿದೆ.

21-03-2023
V-karanataka Pg 12

For more information visit
University Library Website
Web - uasbagrilibindia.org
E-mail- librarian@uasbangalore.edu.in

ಡ್ರೋನ್ ಹಾರಿಸುವ ರೈತರು ಹೆಚ್ಚಾಗಲಿ

ಅನ್ನದಾತರ ಹುರಿದುಂಬಿಸಿದ ಕೃಷಿ ಸಚಿವ ಬಿ.ಸಿ.ಪಾಟೀಲ್

■ **ವಿಕ ಸುದ್ದಿಲೋಕ** ಬೆಂಗಳೂರು

''ದೇಶಕ್ಕೆ ಅನ್ನ ಕೊಡುವ ರೈತರು ತಲೆ ತಗ್ಗಿಸಬಾರದು. ಬದಲಿಗೆ ಸ್ವಾವಲಂಬಿಗಳಾಗಿ ಸೂಟು ಬೂಟು ಧರಿಸಿ ತಲೆಯೆತ್ತಿ ಬದುಕಿ,'' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಅನ್ನದಾತರನ್ನು ಹುರಿದುಂಬಿಸಿದರು.



''ದೇಶದಲ್ಲಿ ದೊಡ್ಡ ದೊಡ್ಡ ಶ್ರೀಮಂತರಿದ್ದಾರೆ. ಆದರೆ, ಅವರ್ಯಾರೂ ಹಸಿದ ಜನರಿಗೆ ಅನ್ನ ಕೊಡಲ್ಲ. ರೈತರು ಮಾತ್ರ ಹಸಿವು ನೀಗಿಸುತ್ತಾರೆ. ರೈತರು ಮುಷ್ಕರ ಮಾಡಿದರೆ ಮನುಕುಲಕ್ಕೆ ಅನ್ನ ಸಿಗಲ್ಲ. ಕೃಷಿ ನಾಶವಾದರೆ ದೇಶಕ್ಕೆ ದುರ್ಭಿಕ್ಷ ಬರುತ್ತದೆ. ಈ ಸತ್ಯ ಅರಿತು ರೈತರಿಗೆ ಶಕ್ತಿ ತುಂಬಿ ಆರ್ಥಿಕವಾಗಿ ಸ್ವಾವಲಂಬಿಗಳಾಗಿಸಬೇಕು,'' ಎಂದು ಮನವಿ ಮಾಡಿದರು.

ರೈತ ವಿದ್ಯಾನಿಧಿ: ''ಸಕಾಲಕ್ಕೆ ಬೆಳೆ ನಷ್ಟದ ವಿಮೆ ಹಣ ವಿತರಣೆಗೆ ಕ್ರಮ ಕೈಗೊಂಡಿದ್ದೇವೆ. ವಿವಿಧ ಕಾರಣಗಳಿಗೆ ಬಾಕಿಯಿದ್ದ979 ಕೋಟಿ ರೂ. ಬೆಳೆ ವಿಮೆಯ ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದೇವೆ. ಗ್ರಾಮೀಣ ಭಾಗದ ರೈತರ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ನಿಟ್ಟಿನಲ್ಲಿ ದೇಶದಲ್ಲಿ ಪ್ರಪ್ರಥಮ ಬಾರಿಗೆ ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ ಯೋಜನೆ ಆರಂಭಿಸಲಾಗಿದ್ದು, ಈವರೆಗೆ 795 ಕೋಟಿ ರೂ. ವಿದ್ಯಾರ್ಥಿವೇತನ ನೀಡಲಾಗಿದೆ. ಕೃಷಿ ಕಾರ್ಮಿಕರ ಮಕ್ಕಳಿಗೂ ಈ ಯೋಜನೆಯ ಸೌಲಭ್ಯ ವಿಸ್ತರಿಸಿ, 52,455 ವಿದ್ಯಾರ್ಥಿಗಳಿಗೆ 17.73 ಕೋಟಿ ರೂ. ಹಣಕಾಸು ನೆರವು ನೀಡಲಾಗಿದೆ,'' ಎಂದು ವಿವರಿಸಿದರು.

''ರಾಜ್ಯದ 5 ಕೃಷಿ ವಿಶ್ವವಿದ್ಯಾಲಯಗಳ ಸ್ನಾತಕ ಪದವಿ ಕೋರ್ಸ್‌ಗಳಲ್ಲಿ ರೈತರ ಮಕ್ಕಳಿಗೆ ಶೇ.10ರಷ್ಟು ಮೀಸಲಾತಿ ಹೆಚ್ಚಿಸಲಾಗಿದೆ,'' ಎಂದರು.

ಲಕ್ಕಿ ಡಿಪ್ ಬಹುಮಾನ

ಕಾರ್ಯಕ್ರಮದಲ್ಲಿ ಪಾಲ್ಗೊಂಡ ರೈತರ ಪೈಕಿ 5 ಮಂದಿಯನ್ನು ಲಕ್ಕಿ ಡಿಪ್ ಮೂಲಕ ಆಯ್ಕೆ ಮಾಡಿ ಬಹುಮಾನ ನೀಡಲಾಯಿತು. ಜಯಪ್ರಕಾಶ್, ವೆಂಕಟರತ್ನಮ್ಮ, ಸರಸ್ವತಿ, ಪುಟ್ಟರಾಜು ಮತ್ತು ಶರಣಪ್ಪ ಅವರು ಬಹುಮಾನಕ್ಕೆ ಪಾತ್ರರಾದರು.

21-03-2023
V-karnataka Pg 01

21-03-2023
V-karnataka Pg 01

ರೈತ ಅಪ್ಪಟ ತಾಯಿ ಇದ್ದಂತೆ

ನಟ ನೀನಾಸಂ ಸತೀಶ್ ಭಾವುಕ ಮಾತಿಗೆ ತಲೆದೂಗಿದ ಸಿಎಂ

■ **ವಿಕ ಸುದ್ದಿಲೋಕ** ಬೆಂಗಳೂರು

ರೈತ ತಾಯಿ ಇದ್ದಂತೆ. ರೈತರು ಹಾಗೂ ತಾಯಂದಿರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸದಾ ದುಡಿಯುವ ಶ್ರಮಜೀವಿಗಳು. ಅವರಿಗೆ ನಾವು ಸದಾ ಋಣಿ ಯಾಗಿರಬೇಕು ಎಂದು ಕನ್ನಡದ ಖ್ಯಾತ ನಟ ನೀನಾಸಂ ಸತೀಶ್ ಆಶಿಸಿದರು.



''ಯಾವುದೇ ಕುಟುಂಬದಲ್ಲಿ ತಂದೆ ತಾನು ಮಾಡಿದ ಕೆಲಸಗಳನ್ನು ಎಲ್ಲರಿಗೂ ಹೇಳುತ್ತಾನೆ. ಆದರೆ, ತಾಯಿ ಎಂದಿಗೂ ಹಾಗೆ ಹೇಳುವುದಿಲ್ಲ. ಆಕೆ ಎಂದಿಗೂ ಮನೆಯ ಸದಸ್ಯರ ಹಿಂದೆ ನಿಂತಿರುತ್ತಾಳೆ. ಹಾಗೆ ಹಿಂದೆ ನಿಂತೇ ಸ್ಫೂರ್ತಿ ತುಂಬುತ್ತಿರುತ್ತಾಳೆ. ಹಾಗೆ ರೈತ ಕೂಡ ಸ್ಫೂರ್ತಿ ತುಂಬುವ, ನಮ್ಮೆಲ್ಲರ ಹಸಿವನ್ನು ನೀಗಿಸುವ ಕಾಯಕಯೋಗಿ,'' ಎಂದು ಬಣ್ಣಿಸಿದರು.

''ರೈತ ಭೂಮಿ ನಡುಗಲಿ, ಗುಡುಗಲಿ, ದೊಡ್ಡ ಗಲಾಟೆಯಾಗಲಿ, ಮಳೆ ಬರಲಿ, ಬಿಸಿಲಿರಲಿ. ಆದರೆ, ಅವನು ಬೆಳೆ ಬೆಳೆಯುವ ಕಾಯಕದಲ್ಲಿ ಎಂದಿಗೂ ಹಿಂದೆ ಸರಿಯುವುದಿಲ್ಲ. ಮಾಡಿದ್ದನ್ನು ಹೇಳುವುದೂ ಇಲ್ಲ. ನಿಸ್ವಾರ್ಥವಾಗಿ ಕೆಲಸ ಮಾಡುತ್ತಾ ಸದಾ ಕಡೇ ಸಾಲಿನಲ್ಲಿ ನಿಲ್ಲುವವನು. ಹೀಗಾಗಿ, ತಾಯಿ-ರೈತ ಎರಡೂ ಈ ನಾಡಿನ ಶ್ರಮ ಜೀವಿಗಳು,'' ಎಂಬ ನೀನಾಸಂ ಸತೀಶ್ ಅವರು ಹೇಳಿದ ಉಪಮೆ ಸಭೆಯಲ್ಲಿ ಮೆಚ್ಚುಗೆಗೆ ಪಾತ್ರವಾಯಿತು.

ವಿಕ ಕಾರ್ಯಕ್ಕೆ ಶ್ಲಾಘನೆ: ''ಜಪಾನ್‌ನ ತತ್ವಜ್ಞಾನಿಯೊಬ್ಬರು ಹೇಳುವಂತೆ ಶಾಂತಿ ಮಣ್ಣಲ್ಲೇ ಇದೆ. ಮನುಷ್ಯರು ಸತ್ತ ಮೇಲೆ ಹೋಗುವುದೂ ಈ ಮಣ್ಣಿಗೆ. ಮಣ್ಣಿನಲ್ಲಿ ಸರ್ವವೂ ಇದೆ. ಹೀಗಾಗಿಯೇ ಭೂಮಿಗೆ ತಾಯಿ ಎಂದು ಕರೆಯಲಾಗಿದೆ. ಇಂಥ ರೈತರಿಗೆ ವಿಜಯ ಕರ್ನಾಟಕ 'ಸೂಪರ್ ಸ್ಟಾರ್' ಎಂದು ಬಿರುದು ಕೊಡುತ್ತಿರುವುದು ತುಂಬಾ ಖುಷಿಯ ಸಂಗತಿ,'' ಎಂದು ಶ್ಲಾಘಿಸಿದರು.

ಮರಳಿ ರೈತನಾಗಿ, ಸಾಯುವೆ!

''ನಾನು ಮಂಡ್ಯದ ಕುಗ್ರಾಮದಿಂದ ಬಂದವನು. ರೈತನ ಮಗ ನಾನು. ನಮಗೆ 30 ಗುಂಟೆ ಜಮೀನಿದೆ. ನಮ್ಮ ಕುಟುಂಬದ ಎಲ್ಲರೂ ಕೃಷಿಕರು. ನಾನು ಮಣ್ಣಿನೊಂದಿಗೆ ಒಡನಾಟ ಇಟ್ಟುಕೊಂಡವನು. ಇಂದು ಸಿನಿಮಾದಲ್ಲಿ ನಾನು ಏನೇ ಸಾಧಿಸಿದ್ದರೂ ರೈತನ ಮಗ ಎಂಬುದನ್ನು ಮರೆಯುವುದಿಲ್ಲ. ನಾನು ರೈತನ ಮಗ ಎಂದು ಹೆಮ್ಮೆಯಿಂದ ಹೇಳುತ್ತೇನೆ. ರೈತನಾಗೇ ಸಾಯಬೇಕು ಎಂಬುದು ನನ್ನ ಆಸೆ,'' ಎಂಬ ನೀನಾಸಂ ಸತೀಶ್ ಮಾತುಗಳಿಗೆ ಚಪ್ಪಾಳೆಗಳ ಸುರಿಮಳೆ ಬಿತ್ತು.



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರೈತ ಸಮೂಹ

ತಾಯಿ-ರೈತ ಶ್ರಮದ ಕವನ

ರೈತರನ್ನು ತಾಯಿಗೆ ಹೋಲಿಸುತ್ತಲೇ ನೀನಾಸಂ ಸತೀಶ್ ಅವರು ತಮ್ಮ ತಾಯಿಯನ್ನು ಸ್ಮರಿಸಿದರು. ವರ್ಷದ ಹಿಂದೆ ಅಗಲಿದ ತಾಯಿಯ ನೆನಪುಗಳು ನಟನ ಬಾಯಿಯಲ್ಲಿ ಕವನವಾಗಿ ಹೊರಹೊಮ್ಮಿತು.

'ನಿನಗಾಗಿ ಹಾಡುವೆನು ಅವ್ವ ಕೇಳೆ. ತಿಳಿ ನೀಲಿ ಆಗಸದಿ ನೀ ಎಲ್ಲಿರುವೆ ಹೇಳೆ...'

'ಮೂಟೆ ಕಷ್ಟ ಹೊತ್ತರೂನು ಬಾಗಲಿಲ್ಲ ನಿನ್ನ ಬೆನ್ನು... ಬಂಡಿ ಬಂಡಿ ನೋವನೆಲ್ಲಾ ಮೀರಿ ನಿಂತಳೋ....'- ಈ ಸಾಲುಗಳನ್ನು ಕೇಳುತ್ತಿದ್ದಂತೆ ಸಭೆ ಭಾವುಕವಾಯಿತು.

ಬಡ ಸಾಧಕರನ್ನು ಗುರುತಿಸಿ

ನಮ್ಮಂಥವರ ಬಳಿ ಹಣ ಇದೆ. ಅದು ಜನರಿಂದ ಸಿಗುತ್ತಿದೆ. ಅದೇ ರೀತಿ ಸಾಕಷ್ಟು ಸೆಲೆಬ್ರಿಟಿಗಳ ಬಳಿ ಹಣ ಇರುತ್ತದೆ. ಅಂಥವರನ್ನು ಕರೆದು ಸನ್ಮಾನಿಸಿ, ಅವರಿಗೆ ಮತ್ತಷ್ಟು ಹಣ ಕೊಡುವುದು, ಪ್ರೋತ್ಸಾಹಿಸುವುದರಲ್ಲಿ ಅರ್ಥವಿಲ್ಲ. ಬದಲಿಗೆ ಸಮಾಜದಲ್ಲಿರುವ ಬಡವರು, ತೀರಾ ಹಿಂದುಳಿದವರು, ಕಟ್ಟ ಕಡೆಯ ವ್ಯಕ್ತಿಗಳನ್ನು ಗೌರವಿಸಬೇಕು ಎಂದು ಸರಕಾರವನ್ನು ಒತ್ತಾಯಿಸಿದರು.

ಹಲವು ವಿಟಮಿನ್‌ಗಳ ಜೀರ್ಣಕೆಗೆ ಕೊಬ್ಬು ಅತ್ಯವಶ್ಯಕ

ವಿಟಮಿನ್‌ಗಳು ಗರಿಷ್ಠ ಪ್ರಮಾಣದಲ್ಲಿ ಲಭಿಸಲು ತಾಜಾ, ಹಸಿ ಆಹಾರ ಪದಾರ್ಥಗಳನ್ನು ಸೇವಿಸುವುದು ಅತ್ಯವಶ್ಯಕ. ಒಂದು ಪಕ್ಷ ಬೇಯಿಸಿದರೂ ಬೇಯಿಸಿದ ನೀರನ್ನು ಹೊರಚೆಲ್ಲದೆ ಸೇವಿಸುವುದರಿಂದ ವಿಟಮಿನ್‌ಗಳು ದೇಹಕ್ಕೆ ಲಭಿಸುತ್ತವೆ.



ಸ್ವಾಸ್ಥ್ಯ ಸಂಪದ

ಡಾ.ಎಸ್.ಪಿ.ಯೋಗಣ್ಣ
Yoganna55@gmail.com

ವಿಟಮಿನ್ ಎ, ವಿಟಮಿನ್ ಡಿ, ವಿಟಮಿನ್ ಇ ಮತ್ತು ಕೆ ಕೊಬ್ಬಿನಲ್ಲಿ ಕರಗುವ ವಿಟಮಿನ್‌ಗಳಾಗಿವೆ. ಇವುಗಳು ಜೀರ್ಣಾಂಗದಲ್ಲಿ ರಕ್ತಗತವಾಗಲು ಆಹಾರದಲ್ಲಿ ಕೊಬ್ಬಿನ ಅಂಶ ಇರುವುದು ಅವಶ್ಯಕ. ಜಿಡ್ಡನ್ನು ಸೇವಿಸಿದರೆ, ಅದು ದೇಹಕ್ಕೆ ವಿಷ ತಪ್ಪುಕಲ್ಪನೆ ಕೆಲವರಲ್ಲಿದೆ. ಜಿಡ್ಡು ದೇಹಕ್ಕೆ ಅಲ್ಪ ಪ್ರಮಾಣದಲ್ಲಿ ಅವಶ್ಯಕ. ಆದರೆಲ್ಲಾ ಜಿಡ್ಡಿನಲ್ಲಿ ಕರಗುವ ಈ ವಿಟಮಿನ್‌ಗಳು ರಕ್ತಗತವಾಗಲು ಜಿಡ್ಡು ಅತ್ಯವಶ್ಯಕ. ಈ ವಿಟಮಿನ್‌ಗಳು ದೇಹದಲ್ಲಿ ಕೇಂದ್ರೀಕರಣಗೊಂಡರೆಂದರೆ ಅಂತರದಲ್ಲಿ ಇವುಗಳನ್ನು ಸೇವಿಸಬಹುದು. ಬಿ ಗುಂಪಿನ ವಿಟಮಿನ್‌ಗಳಂತೆ ಇವುಗಳನ್ನು ಪ್ರತಿನಿತ್ಯ ಸೇವಿಸುವ ಅವಶ್ಯಕತೆ ಇಲ್ಲ. ಇವು ಸ್ಟೆ ಮತ್ತು ಪ್ರಾಣಿಜನ್ಯ ಆಹಾರ ಪದಾರ್ಥಗಳಲ್ಲಿ ನೇರವಾಗಿ ಕ್ರಿಯಾಶೀಲ ರೂಪದಲ್ಲಿರ ಬಹುದು ಅಥವಾ ನಿಷ್ಕ್ರಿಯಾತ್ಮಕ ಪೂರ್ವ ಪ್ರಾಪ್ತಿಯ ರೂಪದಲ್ಲಿದ್ದು, ದೇಹದೊಳಗೆ ನೈಜ ಕ್ರಿಯಾತ್ಮಕ ರೂಪದ ವಿಟಮಿನ್ ಆಗಿ ಪರಿವರ್ತನೆಯಾಗಬಹುದು.

ವಿಟಮಿನ್ ಎ

ವಿಟಮಿನ್ ಎ ನೈಜ, ನೇರ ರೂಪದಲ್ಲಿ ಪ್ರಾಣಿಜನ್ಯ ಆಹಾರ ಪದಾರ್ಥಗಳಲ್ಲಿ ಮಾತ್ರ ಇದೆ. ಈರಿ, ಹಾಲು, ಮೊಟ್ಟೆ ಮೀನು, ಕಾರ್ಡ್ ಲಿವರ್ ಆಯಿಲ್, ಬೆಣ್ಣೆ, ತುಪ್ಪ, ಮೊಸರು, ಮೊಟ್ಟೆಯ ಹಳದಿ, ರೀಫೈನ್ಡ್ ಎಣ್ಣೆಗಳು ಮತ್ತು ವನಸ್ಪತಿ ಇವುಗಳಲ್ಲಿ ನೈಜ ನೇರ ರೂಪದಲ್ಲಿದೆ. ವನಸ್ಪತಿ ಮತ್ತು ರೀಫೈನ್ಡ್ ಎಣ್ಣೆಗಳಿಗೆ ವಿಟಮಿನ್ ಎಅನ್ನು ಕೃತಕವಾಗಿ ಸೇರಿಸಲಾಗುತ್ತದೆ.

ಇದು ಸಸ್ಯಗಳಲ್ಲಿ ಬೀಟಾ ಕೆರೋಟಿನ್ ರೂಪದಲ್ಲಿ ಮತ್ತು ಪ್ರಾಣಿಜನ್ಯ ಆಹಾರ ಪದಾರ್ಥಗಳಲ್ಲಿ ರೆಟಿನಾಲ್ ರೂಪದಲ್ಲಿದ್ದು, ಜೀರ್ಣಾಂಗದ ಸಣ್ಣ ಕರುಳಿನ ಮ್ಯೂಕಸ್ ಪದರದಲ್ಲಿ ವಿಟಮಿನ್ ಎ ಆಗಿ ಪರಿವರ್ತನೆಯಾಗುತ್ತದೆ. ಈ ಪರಿವರ್ತನೆಯೂ ಶೇ.25ರಿಂದ 50ರಷ್ಟು ಮಾತ್ರ ಪರಿಪೂರ್ಣ ವಾಗುತ್ತದೆ. ಸಂಬಾರಿನ ಸೊಪ್ಪು, ನುಗ್ಗೆ ಸೊಪ್ಪು, ಮಾಗಿದ ಹಣ್ಣುಗಳಾದ ಮಾವಿನ ಹಣ್ಣು, ಪರಂಗಿ, ಹಳದಿ ಕುಂಬಳಕಾಯಿ ಇವುಗಳಲ್ಲಿ ಬೀಟಾ ಕೆರೋಟಿನ್ ಅಧಿಕ ಪ್ರಮಾಣದಲ್ಲಿವೆ. ವಿಟಮಿನ್ ಎ ದೇಹದಲ್ಲಿ ಹಲವಾರು ಕಾರ್ಯಗಳಿಗೆ ಉಪಯುಕ್ತ. ಸಹಜ ಬೆಳವಣಿಗೆ ಮತ್ತು ವೃದ್ಧಿ, ಮೂಳೆಯ ಬೆಳವಣಿಗೆ, ಮೃದು ಅಂಗಾಂಶದ ಬೆಳವಣಿಗೆ, ದೃಷ್ಟಿ ಮತ್ತು ಕಣ್ಣಿನ ಕಾರ್ಯ, ನಿರೋಧಕ ಶಕ್ತಿಯ ಬೆಳವಣಿಗೆ, ರಕ್ತೋತ್ಪತ್ತಿ, ಶಕ್ತಿಯ ಸಮತೋಲನ ಕಾಪಾಡುವಿಕೆ, ಗರ್ಭಕೋಶಿನಲ್ಲಿ ನರಮಂಡಲದ ಬೆಳವಣಿಗೆ ಇವೆಲ್ಲಕ್ಕೂ ವಿಟಮಿನ್ ಎ ಅತ್ಯವಶ್ಯಕ. ಪ್ರತಿನಿತ್ಯ 600 ಮೈಕ್ರೋಗ್ರಾಂ ರೆಟಿನಾಲ್ ಅಥವಾ2400 ಮೈಕ್ರೋಗ್ರಾಂ ಬೀಟಾ ಕೆರೋಟಿನ್ ಅವಶ್ಯಕ.

ವಿಟಮಿನ್ ಎ ಕೊರತೆಯಿಂದಾಗಿ ಬೆಳವಣಿಗೆಯ ನ್ಯೂನತೆ, ಕಣ್ಣಿನ ಮತ್ತು ದೃಷ್ಟಿ ಸಮಸ್ಯೆಗಳು, ಚರ್ಮ ತೊಂದರೆಗಳು ಮತ್ತು ನಿರೋಧಕಶಕ್ತಿ ಕೊರತೆಗಳುಂಟಾಗುತ್ತವೆ. ರಾತ್ರಿ ಕುರುಡು, ಕಣ್ಣೀರು ಕಡಿಮೆಯಾಗುವಿಕೆ, ಬರಡುಗಣ್ಣುಗಳು, ಕಾರ್ನಿಯಾ ಬರಡಾಗುವಿಕೆ ಮತ್ತು ತದನಂತರ ಶಿಥಿಲವಾಗಿ ಶಾಶ್ವತ ಅಂಧತ್ವವುಂಟಾಗುತ್ತದೆ. ಚರ್ಮ ಬರಡಾಗುವಿಕೆ, ನೆರಿಗೆ ಕಟ್ಟುವಿಕೆ, ರಫ್ ನಾಗುವಿಕೆ ಮತ್ತು ಕೂದಲುದುರುವಿಕೆ ತೊಂದರೆಗಳುಂಟಾಗುವೆ. ಎದೆ ಮೂಳೆಗಳಲ್ಲಿ ಬೆಳವಣಿಗೆಯ ಅವ್ಯವಸ್ಥೆಗಳು ಕಂಡು ಬರುತ್ತವೆ. ಕಣ್ಣು, ಮೂಗು, ಮೂತ್ರ ದ್ವಾರಗಳು, ಶ್ವಾಸ ಕೋಶಗಳು, ಕಿವಿ, ನೈಸರ್ಗಗಳಲ್ಲಿ ಸೋಂಕುಗಳುಂಟಾಗುತ್ತವೆ. ವಿಟಮಿನ್ ಎ ಅನ್ನು ಚುಚ್ಚುಮದ್ದಾಗಿ ನೀಡುವುದರಿಂದ, ಇದರ ಕೊರತೆಯನ್ನು ನೀಗಿಸಲಾಗುತ್ತದೆ. ವಿಟಮಿನ್ ಎ ಅನ್ನು ಅಧಿಕ ಪ್ರಮಾಣದಲ್ಲಿ ತೆಗೆದುಕೊಳ್ಳುವುದರಿಂದ ತಲೆನೋವು, ವಾಂತಿ, ಪ್ರಜ್ಞಾ ಅವ್ಯವಸ್ಥೆಗಳುಂಟಾಗುತ್ತವೆ. ನಿಲ್ಲಿಸಿದರೆ ಸಹಜ ತೊಂದರೆಗಳು ಇಲ್ಲವಾಗುತ್ತವೆ.

ವಿಟಮಿನ್ ಡಿ

ವಿಟಮಿನ್ ಡಿಯಲ್ಲಿ ಕೋಲೀಕ್ಯಾಲ್ಸಿಫೆರಾಲ್ (ವಿಟಮಿನ್ ಡಿ3), ಕ್ಯಾಲ್ಸಿ ಡಯಾಲ್(25-



ಹೈಡ್ರಾಕ್ಸಿ ವಿಟಮಿನ್ ಡಿ3), ಕ್ಯಾಲ್ಸಿ ಟ್ರಯಾಲ್ (1,25-ಡೈ ಹೈಡ್ರಾಕ್ಸಿ ವಿಟಮಿನ್ ಡಿ3) ಮತ್ತು ಇರ್ಗೋ ಕ್ಯಾಲ್ಸಿ ಫೆರಾಲ್ ಎಂಬ 4 ವಿಧಗಳಿವೆ. ಕೋಲೀಕ್ಯಾಲ್ಸಿ ಫೆರಾಲ್ ಸಹಜವಾಗಿ ಆಹಾರ ಪದಾರ್ಥಗಳಲ್ಲಿ ಮತ್ತು ಸೂರ್ಯನ ಬೆಳಕಿನಿಂದ ಚರ್ಮದಲ್ಲಿ ಉತ್ಪತ್ತಿಯಾಗುತ್ತದೆ ಹಾಗೂ ವನಸ್ಪತಿ ಎಣ್ಣೆ ಮತ್ತು ಕೃತಕ ಪಾನೀಯಗಳಿಗೆ ಇದನ್ನು ಸೇರಿಸಿ ಅವುಗಳ ಪೌಷ್ಟಿಕತೆಯನ್ನು ಹೆಚ್ಚಿಸಲಾಗುತ್ತದೆ. ಕ್ಯಾಲ್ಸಿ ಡಾಯಲ್ ದೇಹದೊಳಗೆ ಸೇರಿಯಲ್ಲಿ ಕೋಲಿ ಕ್ಯಾಲ್ಸಿ ಫೆರಾಲ್‌ನಿಂದ ತಯಾರಾಗಿ ರಕ್ತದಲ್ಲಿ ಲಭ್ಯವಿದ್ದು, ಇದರ ಪ್ರಮಾಣವನ್ನು ಆಳದು ವಿಟಮಿನ್ ಡಿ ಕೊರತೆಯನ್ನು ನಿರ್ಧರಿಸಲಾಗುತ್ತದೆ. ಇದು ಪೂರ್ವ ಹಾರ್ಮೋನ್ ಆಗಿದ್ದು, ಈಲಿ ಮತ್ತು ಅಂಗಾಂಶಗಳಲ್ಲಿ ಕ್ರಿಯಾತ್ಮಕ ರೂಪದ ಹಾರ್ಮೋನ್ ಆದ ಕ್ಯಾಲ್ಸಿ ಟ್ರಯಾಲ್ ಆಗಿ ಪರಿವರ್ತನೆ ಹೊಂದುತ್ತದೆ. ಇದು ಆತ್ಮತ ಪರಿಣಾಮಕಾರಿಯಾದ ಕ್ರಿಯಾಶೀಲ ರೂಪದ ವಿಟಮಿನ್ ಡಿ. ಇರ್ಗೋ ಕ್ಯಾಲ್ಸಿಫೆರಾಲ್ ಲ್ಯಾಬೋರೇಟರಿಯಲ್ಲಿ ಫಂಗಸ್‌ನಿಂದ ತಯಾರು ಮಾಡುವ ವಿಟಮಿನ್ ಡಿ ಕೊರತೆಯಿದ್ದಲ್ಲಿ, ವೈದ್ಯರ ಸಲಹೆ ಮೇರೆಗೆ ನೀಡಲಾಗುವ ವಿಟಮಿನ್ ಡಿ ಇದು. ಚರ್ಮ ಸೂರ್ಯನ ಬೆಳಕಿನ ಅಲ್ಟ್ರಾ ವೈಲೆಟ್ ಬಿ ಕಿರಣಗಳ ಜೊತೆ ಸ್ಪರ್ಶಿಸಿದಾಗ ಚರ್ಮದಲ್ಲಿರುವ 7-ಡಿ ಹೈಡ್ರಾಕ್ಸಿ ಕೊಲೆಸ್ಟಾಲ್ ವಿಟಮಿನ್ ಡಿ3 ಆಗಿ ಪರಿವರ್ತನೆ ಹೊಂದುತ್ತದೆ. ಸೂರ್ಯನ ಎಲ್ಲಾ ಅವಧಿಯ ಕಿರಣಗಳು ಈ ಉಂಟಾಗುತ್ತದೆ. ಕುಗ್ಗಿದ ಬೆಳವಣಿಗೆ, ಮೂಳೆಗಳ ವಕ್ರತೆ ಕಾಲುಗಳು ಬಾಗುವಿಕೆ, ಎದೆ ರೀಬಗಳಲ್ಲಿ ಗೆಡ್ಡೆಗಳು, ಕೀಲುಗಳ ಊತ ಮತ್ತು ತಲೆ ಬುರುಡೆಯ ಅವ್ಯವಸ್ಥೆಗಳು, ಹಲ್ಲುಗಳ ಬೆಳವಣಿಗೆಯಾಗದಿರುವಿಕೆ ಮತ್ತು ಅವುಗಳಲ್ಲಿ ತೊಂದರೆಗಳುವಿಕೆ ಇವು ರಿಕೆಟ್ಸ್ ಕಾಯಿಲೆಯ ಪ್ರಮುಖ ಲಕ್ಷಣಗಳು. ವಯಸ್ಕರಲ್ಲಿ ಇದರ ಕೊರತೆಯಿಂದ ಆಸ್ಟಿಯೋ ಮಲೇಷಿಯಾ (ಮೂಳೆಗಳ ಶಿಥಿಲತೆ) ಉಂಟಾಗಿ ಮೂಳೆಗಳಲ್ಲಿ ನೋವು, ಬಹುಬೇಗ ಮುರಿಯುವಿಕೆ, ಬಾಗುವಿಕೆ ಗಳುಂಟಾಗುಬಹುದು. ಇದನ್ನು ಹೆಚ್ಚಾಗಿ ಸೇವಿಸುವುದರಿಂದ ವಿಷಮತೆಯ ಲಕ್ಷಣಗಳುಂ ಟಾಗಿ ಮಾನಸಿಕ ಶಿಥಿಲತೆ, ವಾಂತಿ, ಮೆಲುದ್ದತೆ ತೊಂದರೆಗಳು ಉಂಟಾಗುತ್ತವೆ. ವಿಟಮಿನ್ ಡಿ ಕೊರತೆಯಿಂದ ಪ್ಯಾಂಕ್ರಿಯಾಸ್ ಗ್ರಂಥಿ ನಾಶವಾಗಿ ಸಕ್ಕರೆಕಾಯಿಲೆಗೂ ಕಾರಣವಾಗಬಹುದು ಎನ್ನಲಾಗಿದೆ. ದೇಹದ ಎಲ್ಲ ಜೀವಕೋಶಗಳ ಒಟ್ಟಾರೆ ಆರೋಗ್ಯಸ್ಥಿತಿಗೆ ವಿಟಮಿನ್ ಡಿ ಅತ್ಯವಶ್ಯಕವಾಗಿದ್ದು, ಇದರ ಕೊರತೆಯಿಂದ ಜೀವಕೋಶಗಳ ಚಿಯಾಪಚಯ ಕ್ರಿಯೆಯಲ್ಲಿ ಅವ್ಯವಸ್ಥೆ ಉಂಟಾಗಿ ಹಲವಾರು ಬಗೆಯ ಕಾಯಿಲೆಗಳಿಗೆ ಕಾರಣವಾಗಬಹುದು ಎನ್ನಲಾಗಿದೆ.

ವಿಟಮಿನ್ ಇ(ಆಲ್ಫಾ- ಟೋಕೋ ಫೆರಾಲ್)

ಇದು ದೇಹದ ಅಂಗಾಂಶಗಳು ನಾಶವಾಗುವುದನ್ನು ತಡೆಗಟ್ಟುತ್ತದೆ. ಜೀವಕೋಶಗಳ ಪದರ ದಲ್ಲಿರುವ ಜಿಡ್ಡಿನಾಮ್ಲಗಳನ್ನು ನಾಶದಿಂದ ರಕ್ಷಿಸಿ ಅವುಗಳ ಆರೋಗ್ಯವನ್ನು ತಡೆಗಟ್ಟುತ್ತದೆ. ದೇಹದೊಳಗೆ ಪರಿಣಾಮಕಾರಿಯಾದ ಆ್ಯಂಟಿಆಕ್ಸಿಡೆಂಟ್ ಆಗಿ ಕಾರ್ಯನಿರ್ವಹಿಸಿ ಕ್ಯಾನ್ಸರ್ ಮತ್ತಿತರ ಕಾಯಿಲೆಗಳ ಉತ್ಪತ್ತಿಯನ್ನು ತಡೆಗಟ್ಟುತ್ತದೆ. ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ಸಾಮಾನ್ಯ ಆರೋಗ್ಯ ಸ್ಥಿತಿಯನ್ನು ವೃದ್ಧಿಸುತ್ತದೆ. ಇದು ಜಿಡ್ಡಿನಾಮ್ಲಗಳನ್ನು ರಕ್ಷಿಸುತ್ತದೆ. ಇದರ ಕೊರತೆ ಸಂತಾನೋತ್ಪತ್ತಿಗೂ ಕಾರಣವಾಗಬಹುದು ಎನ್ನಲಾಗಿದೆ. ಸಸ್ಯಜನ್ಯ ಎಣ್ಣೆಗಳಲ್ಲಿ, ಸೊಪ್ಪುಯಕ್ತ ತರಕಾರಿಗಳು, ಹಾಲು, ಮೊಟ್ಟೆ ಮಾಂಸ ಮತ್ತು ಮೀನುಗಳಲ್ಲಿ ಸಹಜವಾಗಿ ಲಭಿಸುತ್ತದೆ. ಇದು ಬಹುಪಾಲು ಎಲ್ಲ ಆಹಾರ ಪದಾರ್ಥಗಳಲ್ಲೂ ಲಭಿಸುವುದರಿಂದ ಇದರ ಕೊರತೆ ಅಪರೂಪ. ರಕ್ತದಲ್ಲಿ ಇದರ ಸಹಜ ಪ್ರಮಾಣ 0.5 ಮಿ.ಗ್ರಾಂ/ಕೆ.ಜಿ./ಎಂ.ಎಲ್.

ವಿಟಮಿನ್ ಕೆ

ಇದು ರಕ್ತ ಹೆಪ್ಪುಗಟ್ಟುವ ಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಕ್ತ ಹೆಪ್ಪೋತ್ಪತ್ತಿಗೆ ಅವಶ್ಯಕವಾದ ಪ್ರೋಥ್ರಾಂಬಿನ್ ಈಲಿಯಲ್ಲಿ ಉತ್ಪತ್ತಿಯಾಗಲು ವಿಟಮಿನ್ ಕೆ ಅತ್ಯವಶ್ಯಕ. ಹಸಿರು ಎಲೆಯುಳ್ಳ ತರಕಾರಿಗಳಲ್ಲಿ ಇದು ಯಥೇಚ್ಛವಾಗಿ ಲಭಿಸುತ್ತದೆ. ಜೀರ್ಣಾಂಗ ವ್ಯವಸ್ಥೆಯಲ್ಲಿರುವ ಬ್ಯಾಕ್ಟೀರಿಯಾಗಳಿಂದಲೂ ಸಹ ಇದು ತಯಾರಾಗುತ್ತದೆ. ದೀರ್ಘಕಾಲ ಆ್ಯಂಟಿ ಬಯಾಟಿಕ್‌ಗಳನ್ನು ಉಪಯೋಗಿಸುವವರಲ್ಲಿ ಸಹಜ ಬ್ಯಾಕ್ಟೀರಿಯಾಗಳು ಕೊಲ್ಲಲ್ಪಟ್ಟು ಇದರ ಕೊರತೆಯುಂಟಾಗುತ್ತದೆ. ಇದರ ಕೊರತೆಯಿಂದ ರಕ್ತಸ್ರಾವಗಳುಂಟಾಗುತ್ತವೆ. 0.5-1ಮಿ.ಗ್ರಾಂ ವಿಟಮಿನ್ ಕೆ ಅನ್ನು ಚುಚ್ಚುಮದ್ದಾಗಿ ಸ್ಟಾಯುವಿಗೆ ನೀಡುವುದರಿಂದ ಇದರ ಕೊರತೆಯನ್ನು ಸರಿದೂಗಿಸಲಾಗುತ್ತದೆ. ಹುಟ್ಟುವ ಮಕ್ಕಳಲ್ಲಿ ಈ ವಿಟಮಿನ್ ಕೆಯಿರಣಕ್ ಇಲ್ಲದಿರುವುದರಿಂದ ಹುಟ್ಟಿದ ತಕ್ಷಣ ಎಲ್ಲ ಮಕ್ಕಳಿಗೂ ಇದನ್ನು ನೀಡಲಾಗುತ್ತದೆ. ಅಲ್ಪ ಪ್ರಮಾಣದಲ್ಲಿ ಈ ವಿಟಮಿನ್ ಅನ್ನು ಮತ್ತು ಜಿಡ್ಡಿನ ಅಂಗಾಂಶಗಳಲ್ಲಿ ಶೇಖರಣೆಯಾಗುತ್ತದೆ.

ಒಂದೊಂದು ಆಹಾರ ಪದಾರ್ಥದಲ್ಲಿ ಒಂದೊಂದು ವಿಟಮಿನ್‌ಗಳು ಇದ್ದು, ಪ್ರತಿನಿತ್ಯ ವಿಭಿನ್ನ ರೀತಿಯ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ದೇಹಕ್ಕೆ ಅವಶ್ಯಕವಾದ ಎಲ್ಲ ವಿಟಮಿನ್‌ಗಳು ಲಭಿಸುವಂತಾಗಿಸಿಕೊಳ್ಳಬಹುದು. ವಿಟಮಿನ್‌ಗಳು ಗರಿಷ್ಠ ಪ್ರಮಾಣದಲ್ಲಿ ಲಭಿಸಲು ತಾಜಾ, ಹಸಿ ಆಹಾರ ಪದಾರ್ಥಗಳನ್ನು ಸೇವಿಸು ವುದು ಅತ್ಯವಶ್ಯಕ. ಒಂದು ಪಕ್ಷ ಬೇಯಿಸಿದರೂ ಬೇಯಿಸಿದ ನೀರನ್ನು ಹೊರಚೆಲ್ಲದೆ ಸೇವಿಸುವು ದರಿಂದ ವಿಟಮಿನ್‌ಗಳು ದೇಹಕ್ಕೆ ಲಭಿಸುತ್ತವೆ. ವಿಟಮಿನ್‌ಗಳು ಪ್ರತಿನಿತ್ಯ ಅವಶ್ಯಕವಿದ್ದರೂ ಅವುಗಳನ್ನು ತೊಂದರೆಗಳು ಕಂಡು ಬರುವಷ್ಟರ ಮಟ್ಟಿಗೆ ಸೇವಿಸಿದಲ್ಲಿ ವಿಟಮಿನ್‌ಗಳ ಕೊರತೆಯುಂಟಾಗುವ ಪ್ರಸಂಗ ಬರುವುದಿಲ್ಲ. ವಿಟಮಿನ್‌ಗಳ ಕೊರತೆಯಿಂದ ಉಂಟಾಗುವ ತೊಂದರೆಗಳು ಪ್ರಾರಂಭದಲ್ಲಿ ಮಂದಗತಿಯಾದುದರಿಂದ ಗಮನಕ್ಕೆ ಬಾರದೆ ದೇಹದ ಅಂಗಾಂಗಗಳು ನಿಧಾನವಾಗಿ ಜಖಂಗೊಂಡು ಗಂಭೀರ ಸ್ಥರದ ತಲುಪದನಂತರ ತೊಂದರೆಗಳುಂಟಾಗುವುದರಿಂದ ಅಲ್ಪಿಯತಕ್ಕ ಕಾಯುವುದು ಸೂಕ್ತವಲ್ಲ. ವಿಟಮಿನ್‌ಗಳ ಕೊರತೆಯನ್ನು ಸರಿದೂಗಿಸಲು ವಿಟಮಿನ್ ಮಾತ್ರೆಗಳ ಮೊರೆ ಹೋಗುವ ಬದಲು ನೈಜ ಆಹಾರ ಪದಾರ್ಥಗಳ ಮೂಲಕ ಇವುಗಳನ್ನು ಪಡೆಯುವುದು ಸೂಕ್ತ.

ಅಭಿಮತ

ಮೋಹನದಾಸ ಕಿಣಿ, ಕಾಪು

ಹುದ್ದೆ ಮಾತ್ರ ದೊಡ್ಡದು, ವ್ಯಕ್ತಿತ್ವ ಚಿಕ್ಕದು!

ಕೆಲವರು ಎಷ್ಟು ದೊಡ್ಡ ಹುದ್ದೆಗೇರಿದರೂ ಅಂತಹ ಸ್ಥಾನಕ್ಕೆ ಸಲ್ಲಬೇಕಾದ ಗೌರವ ಮತಿಕ ಮತ್ತು ವರ್ಚಸ್ಸುತ್ತಾರೆ. ಇಂಥ ಕೆಲವು ಮೆಲುಕುಗಳು ಇಲ್ಲಿವೆ.

ಪ್ರಧಾನಿ ಹುದ್ದೆಗೇರಿದ ಮೊತ್ತ ಮೊದಲ ಕನ್ನಡಿಗ ಎಂಬ ಹೆಗ್ಗಳಿಕೆಗೆ ಭಾಜನರಾದ ದೇವೇಗೌಡರು ಪ್ರಧಾನಿ ಹುದ್ದೆಗೆ ಏರಿದ ಕ್ಷಣ ಮಾಡಿದ ಮೊದಲ ಕೆಲಸ, ಅವರ ರಾಜೀನಾಮೆ ಏಳಿಗೆಗೆ ಮೆಟ್ಟಿಲಾಗಿದ್ದ ರಾಮಕೃಷ್ಣ ಹೆಗಡೆಯವರನ್ನು, ಆಗ ಜನತಾದಳ ಅಧ್ಯಕ್ಷರಾಗಿದ್ದ ಎ.ಪಿ.ಸಿಂಗ್ ಅವರ ಮೇಲೆ ಒತ್ತಡ ಹೇರಿ ಪಕ್ಷದಿಂದ ಉಚ್ಚಾಟಣೆ ಮಾಡಿಸಿದ್ದು. ನಂತರದ ಬೆಳವಣಿಗೆಗಳು ವಿವರಿಸಲು ರೇಜಿಗೆ ತರುವಷ್ಟು ಕೆಳಮಟ್ಟದ್ದು ಬಿಡಿ.

ಸಿದ್ದರಾಮಯ್ಯನವರು 2013ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಆಗಿನ್ನೂ ಸಚಿವ ಸಂಪುಟ ರಚನೆ ಕೂಡ ಆಗಿರಲಿಲ್ಲ. ಆದರೆ ಅವರು ಮಾಡಿದ ಮೊತ್ತ ಮೊದಲ ಕೆಲಸ, ಅವರು ಸ್ಪರ್ಧಿಸಿದ್ದ ಕ್ಷೇತ್ರದಲ್ಲಿದ್ದ ಪೋಲೀಸ್ ಅಧಿಕಾರಿಯೊಬ್ಬರನ್ನು ವರ್ಗಾವಣೆ ಮಾಡಿ, ಅವರ ವಿರುದ್ಧ ಹಿಟ್ಟಿಗೆ ಆದೇಶಿಸಿದ್ದು! ಕಾರಣವಿಷ್ಟೇ: ಆ ಪೋಲೀಸ್ ಅಧಿಕಾರಿ ಸಿದ್ದರಾಮಯ್ಯನವರ ಮಗ ರಾಕೇಶ್ ವಿರುದ್ಧ ಚುನಾವಣಾ ಆಕ್ರಮವೆಸಗಿದ ಬಗ್ಗೆ ಪ್ರಕರಣ ದಾಖಲಿಸಿದ್ದರು. ಇದೇ ಕಾರಣವೆಂದು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ, 2018ರ ಚುನಾವಣೆಯಲ್ಲಿ ಅದೇ ಕ್ಷೇತ್ರದಲ್ಲಿ ಹೀನಾಯವಾಗಿ ಸೋತರು ಎಂಬುದು ಬೇರೆ ಮಾತು.

ಇನ್ನು, ದೇಶದ ಮೊದಲ ಮಹಿಳಾ ರಾಷ್ಟ್ರಪತಿಯೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಪ್ರತಿಭಾ ಪಾಟೀಲ್, ಪದವಿಯಿಂದ ನಿರ್ಗಮಿಸುವಾಗ, ತಮಗೆ ರಾಷ್ಟ್ರಪತಿ ಅಧಿಕಾರದ ಅವಧಿಯಲ್ಲಿ ಸಿಕ್ಕ ಎಲ್ಲ ಉಡುಗೊರೆಗಳನ್ನು ಗಂಟುಕಟ್ಟಿ ಮನೆಗೆ ಸಾಗಿಸಿದ್ದರು. ತ್ತರಪ್ರದೇಶದ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಹುದ್ದೆಯಿಂದ ನಿರ್ಗಮಿಸುವಾಗ, ಅಧಿಕೃತ ನಿವಾಸಕ್ಕೆ ಅಳವಡಿಸಲಾಗಿದ್ದ ವಿದೇಶಿ ನಿರ್ಮಿತ ನೆಲಹಾಸುಗಳನ್ನೂ (ಖಚ್ಚಿತ್ತಿರಿ) ಕಿತ್ತು ಸಾಗಿಸಿದರು.

ಇನ್ನು ರಾಜಕಾರಣಿಗಳು ಎಷ್ಟೇ ಉನ್ನತ ಹುದ್ದೆ ಏರಿದರೂ ಸ್ಥಾನಿತ ಹಿತಾಸಕ್ತಿಯ ವಿಷಯಕ್ಕೆ ಬಂದಾಗ ಎಷ್ಟು ಕೆಳಮಟ್ಟಕ್ಕೂ ಇಳಿಯಬಲ್ಲರು ಎಂಬುದಕ್ಕೆ ಚಿಕ್ಕದೊಂದು ಉದಾಹರಣೆ: ಇಂದಿರಾಗಾಂಧಿಯವರ ಕೃಪಾಕಟಾಕ್ಷದಿಂದ ರಾಷ್ಟ್ರಪತಿಯಂತಹ ಗೌರವಾನ್ವಿತ ಹುದ್ದೆಗೇರಿದವರಲ್ಲಿ ಗ್ಯಾನಿ ಜೈಲ್‌ಸಿಂಗ್ ಒಬ್ಬರು. ಅವರೊಮ್ಮೆ ಮಾತನಾಡುತ್ತ, ಇಂದಿರಾ ಕುಟುಂಬಕ್ಕೆ ತನ್ನ ನಿಷ್ಠೆಯನ್ನು ಹೀಗೆ ವ್ಯಕ್ತಪಡಿಸುತ್ತಾರೆ: ಇಂದಿರಾಗಾಂಧಿ ಆಜ್ಞಾಪಿಸಿದರೆ ನಾನು ಆಕೆಯ ಮನೆಯಲ್ಲಿ ಕಸ ಗುಡಿಸಲಿಕ್ಕೂ ಸಿದ್ಧ!

ಇನ್ನು ಸ್ವಲ್ಪ ಕೆಳಗಿನ ಹಂತದವರ ಕತೆಗಳು ಹೀಗಿವೆ: ಅಪರೂಪಕ್ಕೆ ಗ್ರಾಮ ಪಂಚಾಯತಿಯೋ ತಾಲೂಕು ಪಂಚಾಯತಿಯೋ, ಗೆದ್ದು ಜನಪ್ರತಿನಿಧಿ ಎನಿಸಿದ ಒಬ್ಬ ಸರಕಾರಿ ಆಸ್ಪತ್ರೆಗೆ ಬರುತ್ತಾನೆ. ಜಯಿಲ್ಲಿ ಕೆಲವು ಬೆಂಬಲಿಗರು. ತುರ್ತು ಪರಿಸ್ಥಿತಿಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವುದು ಪ್ರಥಮ ಆದ್ಯತೆ. ಆ ದಿನ ಇಂತಹ ಪ್ರಕರಣದಲ್ಲಿ ರೋಗಿಗೆ ಚಿಕಿತ್ಸೆ ನೀಡುವಲ್ಲಿ ಮಗ್ನರಾಗಿದ್ದ ವೈದ್ಯರೊಬ್ಬರು ಹೊರಗೆ (ಏಪ್ರನ್) ಧರಿಸಿರಲ್ಲಿ ಆಸ್ಪತ್ರೆಗೆ ನಿವಾಸಕ್ಕೆ ಆಗಮಿಸಿದ ಜನಪ್ರತಿನಿಧಿ ದೊಡ್ಡ ಸ್ವರದಲ್ಲಿ 'ನಿಮಗೆ ಡಿಗ್ರಿ ಕೊಟ್ಟದ್ದು ಯಾರು? ಏಪ್ರಾನ್ ಹಾಕಿದ ಆಸ್ಪತ್ರೆಗೆ ಬರಲಾರದೆಯು ಗೊತ್ತಿಲ್ಲವೇ!?' ಇದನ್ನು ಹೇಳಿದ್ದು ಎಲ್ಲರ ಎದುರಿಗೆ! ಕೆಲ ರಾಜಕಾರಣಿಗಳಂತೂ ಜನರು ಯಾವುದಾದರೂ ಕೆಲಸಕ್ಕೆಂದು ಭೇಟಿಯಾದರೆ, ಸರಕಾರವೆಂದರೆ ನಾನು, ಕೆಲಸ ಆಗಬೇಕಾದರೆ ನನ್ನ ಕಾಲು ಹಿಡಿಯಬೇಕು